ಹೇಳಿದ್ದಾರೆ. ಮಾನ್ಯ ಸಚಿವರು ನಮ್ಮ ಜಿಲ್ಲೆಯವರು. ಹೀಗಾಗಿ ಈ ಜಿಲ್ಲೆಯ ಪರಿಸ್ಥಿತಿ ಅವರಿಗೆ ಚೆನ್ನಾಗಿ ಗೊತ್ತಿದೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಹಳ್ಳಿಗಳಿಗಿಂತ ಹ್ಯಾಮ್ಲೆಟ್ಸ್ ಹೆಚ್ಚಾಗಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಪವರ್ ಜನರೇಟ್ ಆಗುತ್ತಿದೆ. ಅದರ ಸಲುವಾಗಿ ಆ ಜಿಲ್ಲೆಯಲ್ಲಿ ಪ್ರಾಧಾನ್ಯತೆಯ ಮೇಲೆ ಈ ಹ್ಯಾಮ್ಲೆಟ್ಸ್ ಎಲೆಕ್ಟ್ರಿಫೈ ಆಗಬೇಕು. ಮತ್ತು ಅದಕ್ಕೆ ಬೇಕಾಗುವ ಪರ್ಚೆಕ್ಯುಲರ್‌ನ್ನು ಪ್ರಯಾರಿಟಿ ಮೇಲೆ ರಿಲೀಸ್ ಮಾಡಬೇಕೆಂಬ ನಿರ್ಣಯವನ್ನು ನಮ್ಮ ಸರ್ಕಾರ ಇದ್ದಾಗ ತೆಗೆದುಕೊಂಡಿದ್ದೆವು ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ. ಬಂದಿದ್ದರೆ ಅದರ ಬಗ್ಗೆ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರಿ ಎಸ್.ಎಂ. ಯಾಹ್ಯಾ.—ತಾವು ಬರುವುದಕ್ಕೆ ಮುಂಚೆ ಶ್ರೀಮತಿ ಮೋಟಮ್ಮನವರು ಇದೇ ಪ್ರಶ್ನೆಯನ್ನು ಕೇಳಿದ್ದರು. ಅವರ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಹೇಳಿದೆ. ಮಲೆನಾಡು ಪ್ರದೇಶ ಅಂದರೆ ಬರೀ ಉತ್ತರಕನ್ನಡ ಜಿಲ್ಲೆ ಎಂದು ಮಾತ್ರ ಹೇಳಲಿಲ್ಲ. ಎಲ್ಲೆಲ್ಲಿ ಹ್ಯಾಮ್‌ಲೆಟ್ಸ್ ಬರುತ್ತವೆ ಅಲ್ಲೆಲ್ಲ ಎಲೆಕ್ಟ್ರಿಫಿಕೇಷನ್ ಮಾಡಬೇಕೆನ್ನುವುದು ನಮ್ಮ ಸರ್ಕಾರದ ನೀತಿಯಾಗಿದೆ. ಬ್ಯಾಂಕಿನಿಂದ ಹಣ ಕಾಸನ್ನು ಯಾವರೀತಿ ದೊರಕಿಸಿಕೊಡಬೇಕು ಎಂಬುದರ ಬಗ್ಗೆ ಮಾತುಕತೆಯನ್ನು ನಡೆಸುತ್ತಾ ಇದ್ದೇವೆ ಬರೀ ಉತ್ತರಕನ್ನಡ ಜಿಲ್ಲೆ ಮಾತ್ರವಲ್ಲ ಇತರ ಮಲೆನಾಡು ಪ್ರದೇಶ ಅಂದರೆ ಬರೀ ವಿಲೇಜ್ ಲೆವೆಲ್ ನಲ್ಲಿ ಸೇರಿದರೆ ಸಾಲದು ಹ್ಯಾಮ್ಲೆಟ್‌ನಲ್ಲಿ ವಿದ್ಯುತ್ ಕೊಡಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟ ಉತ್ತರ ನನಗೆ ತೃಪ್ತಿಯಾಗಲಿಲ್ಲ. ಏತಕ್ಕೆಂದರೆ, ಇವತ್ತು ನಾರ್ತ್ ಕೆನರಾದಲ್ಲಿ ಜನ ಸ್ಯಾಕ್ರಿಫೈಸ್‌ಮಾಡಿ ಪವರ್ ಏನು ಜನರೇಟ್ ಆಗುತ್ತಿದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಬರೀ ಮಲೆನಾಡು ಪ್ರದೇಶದಲ್ಲಿ ಮಾಡಬಾರದೆಂದು ಹೇಳಲಿಲ್ಲ. ಮೊದಲು ಗೌವರ್ನ್‌ಮೆಂಟ್ ಡಿಸಿಷನ್ ಆಗಿದೆ. ಅದರ ಬಗ್ಗೆ ನೇರವಾಗಿ ಪ್ರಶ್ನೆ ಕೇಳಿದರೆ ಉತ್ತರ ಕೊಟ್ಟಿಲ್ಲ. ಇವತ್ತು ಎಲೆಕ್ಟ್ರಿಫಿಕೇಷನ್ ನಾರ್ತ್ ಕೆನರಾದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಾಡುತ್ತಿದ್ದಾರೆ. ಸಾಕಷ್ಟು ಹೊಸ ಪ್ರಾಜೆಕ್ಟ್‌ಗಳೂ ಕೂಡ ಬರುತ್ತಿದೆ. ಅದರಿಂದ ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತಿದೆ. ಆದ್ದರಿಂದ ನಾರ್ತ್ ಕೆನರಾದಲ್ಲಿರುವ ಇಂಡಸ್ಟ್ರೀಸ್‌ಗೆ ಮತ್ತು ನಾರ್ತ್ ಕೆನರಾದಲ್ಲಿರುವ ಅಗ್ರಿಕಲ್ಚರಿಸ್ಟ್‌ಗೆ ತಾವು ಕನ್‌ಸೇಷನ್ ರೇಟ್‌ನಲ್ಲಿ ವಿದ್ಯುತ್‌ನ್ನು ಕೊಡುವ ವಿಚಾರ ಮಾಡುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ.—ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವರೀತಿ ಡಿಸ್‌ಕ್ರಿಮಿನೇಷನ್ ಆಗುತ್ತದೋ ಗೊತ್ತಿಲ್ಲ. ನಿಮ್ಮ ಕೈಯಲ್ಲಿ ಆಗದ ಕೆಲಸ ನಾವು ಸಡನ್‌ಆಗಿ ಈಗ ಮಾಡಲಿಕ್ಕೆ ಸಾಧ್ಯವಿಲ್ಲ.

ಕತ್ತಲು ಪ್ರದೇಶದ ವಂಚಿಕೆ

ಪ್ರಶ್ನೆ. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಲು).—ಮಾನ್ಯ ಸಮಾಜ ಕಲ್ಯಾಣ, ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಕಪ್ಪು ಪ್ರದೇಶಗಳೆಂದು ಘೋಷಿಸಲಾಗಿರುವ ತಾಲ್ಲೂಕುಗಳ ಹೆಸರು :

ಆ) ಈ ಘೋಷಣೆಗೆ ಕಾರಣಗಳು ;

ಇ) ಕಪ್ಪು ಪ್ರದೇಶವೆಂದು ಘೋಷಿಸಲ್ಪಟ್ಟ ಪ್ರದೇಶಗಳಲ್ಲಿ ಸುಮಾರು ೪–೫ ಸಾವಿರ ಗ್ಯಾಲನ್ ನೀರು ಇಳುವರಿ ಬಂದಿರತಕ್ಕಂತ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿಲ್ಲವೆಂಬ ವಿಷಯದಲ್ಲಿ ಸರ್ಕಾರಕ್ಕೆ ಯಾವುದೇ ದೂರುಗಳು ರೈತರಿಂದ ಬಂದಿದೆಯೇ :

ಈ) ಸಾಕಷ್ಟು ನೀರು ಇಳುವರಿ ಇರುವ ಕೊಳವೆ ಬಾವಿಗಳಿಗೆ ಜರೂರು ವಿದ್ಯುಚ್ಛಕ್ತಿ ಸಂಪರ್ಕ ಒದಗಿಸಲು ಸರಕಾರ ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಗೌರಿಬಿದನೂರು, ಮುಳಬಾಗಿಲು

ಆ) ಇಂತಹ ಪ್ರದೇಶಗಳಲ್ಲಿ ಅಂತರ್ಜಲ ಪುನರ್ ಪೂರಿತೀಕರಣದ ಪ್ರಕಾರ ವಾರ್ಷಿಕ ಉತ್ಕರ್ಷದ ಶೇಕಡ ೮೫ಕ್ಕೂ ಹೆಚ್ಚು ಪ್ರಮಾಣದಲ್ಲಿ ಅಂತರ್ಜಲವನ್ನು ಉಪಯೋಗ ಮಾಡಲಾಗುತ್ತಿದೆ.

ಇ) ಹೌದು.

ಈ) ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಧನ ಸಹಾಯ ಲಭ್ಯವಾಗದೇ ಇರುವುದರಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಧನ ಮೂಲಗಳಿಂದಲೇ ನೀರಾವರಿ ಪಂಪುಗಳನ್ನು ಆಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಗ್ರೌಂಡ್ ವಾಟರ್ ರಿಸೋರ್ಸಸ್ ಬಗ್ಗೆ ಸರ್ಕಾರದವರು ಯಾವುದಾದರೂ ಏಜೆನ್ಸಿಗೆ ಕೇಳಿದ್ದೀರಾ. ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಗ್ರೌಂಡ್‌ವಾಟರ್ ರಿಸೋರ್ಸಸ್ ಹೇಗಿದೆ ಎಂದು ಯಾವುದಾದರೂ ಏಜೆನ್ಸಿಗೆ ಕೇಳಿದ್ದಿರಾ. ಆ ಏಜೆನ್ಸಿಯವರು ನಿಮಗೆ ಏನು ರಿಪೋರ್ಟ್ ಕೊಟ್ಟಿದ್ದಾರೆ ?

ಶ್ರೀ ಎಸ್.ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಯಾರಿಗೆ ಹೋಗಬೇಕು ಎಂದು ಗೊತ್ತಾಗಲಿಲ್ಲ. ಈ ಹೆಸರು ಹಾಕಿದ್ದಾರೆ. ಆದರೆ ಫೈಲು ಮಾನ್ಯ ಶಿವಣ್ಣನವರಿಗೆ ಹೋಗಿದೆಯೆಂದು ಕಾಣುತ್ತದೆ. ಪ್ರಶ್ನೆಯನ್ನು ಕೇಳುವಾಗ ಎರಡು ಇಲಾಖೆಗಳನ್ನು ಸೇರಿಸಿ ಪ್ರಶ್ನೆಯನ್ನು ಕೇಳಿ ಬಿಟ್ಟಿದ್ದಾರೆ. ನನಗೆ ಫೈಲು ಬಂದರೆ ಆದಕ್ಕೆ ನಾನೇ ಉತ್ತರ ಕೊಡುತ್ತೇನೆ. ಅಥವಾ ನೀವು ಪ್ರಶ್ನೆಯನ್ನು ಸ್ವಲ್ಪ ಬೇರೆ ಮಾಡಿ, ಒಂದು ಇಲಾಖೆಗೆ ಸಂಬಂಧಪಟ್ಟ ಹಾಗೆ ಕೇಳಿ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಇದನ್ನು ಬೇರೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಎರಡು ವರ್ಷಗಳಿಂದ ಸುಮಾರು ೨೦೦ ಜನರು ಬೋರ್‌ವೆಲ್ ಹಾಕಿದ್ದಾರೆ. ಅದು ಕತ್ತಲೆ. ಪ್ರದೇಶವೆಂದು ಕೆ.ಇ.ಬಿ. ಯವರು ಪವರ್ ಕೊಡುತ್ತಿಲ್ಲ. ಬ್ಯಾಂಕ್‌ನವರು ಸಾಲವನ್ನೂ ಕೊಡುವುದಿಲ್ಲ ಪಿ.ಎಲ್.ಡಿ ಬ್ಯಾಂಕ್‌ನವರು ಮತ್ತು ಸಿಂಡಿಕೇಟ್ ಬ್ಯಾಂಕ್‌ನವರು ಸಾಲವನ್ನು ಕೊಡುವುದಿಲ್ಲ. ಇತ್ತೀಚೆಗೆ ಒಂದು ವಾರದ ಹಿಂದೆ ಹತ್ತು ಬೋರ್‌ವೆಲ್ ಹಾಕಿಸಿದ್ದಾರೆ.

ಅಧ್ಯಕ್ಷರು.—ಇದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಬಿ. ಶಿವಣ್ಣ.—ನಾನು ಡಿಸ್‌ಕಸ್ ಮಾಡಿ ಹೇಳುತ್ತೇನೆ.

ಅಧ್ಯಕ್ಷರು.—ಡಿಸ್‌ಕಸ್ ಮಾಡಿ ಹೇಳುತ್ತಾರಂತೆ. I will withhold this question. It will come up again next week.

ಶ್ರೀ ಎಂ. ವಿ. ವೆಂಕಟಪ್ಪ.—ನಮ್ಮ ಟೌನಿನಲ್ಲಿ ಕುಡಿಯಲು ನೀರು ಸಿಗದೆ ತೊಂದರೆಯಾಗಿದೆ ಪವರ್ ಕೊಡುತ್ತಿಲ್ಲ. ಹೋದವಾರ ಹತ್ತು ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಒಂದೊಂದು ಬೋರ್‌ವೆಲ್‌ನಲ್ಲಿ ೩-೪ ಸಾವಿರ ಗ್ಯಾಲನ್ ನೀರು ಬರುತ್ತಿತ್ತು. ಇವರು ಪವರ್ ಕೊಡುತ್ತಾ ಇಲ್ಲ. ಮುಳುಬಾಗಿಲು ಟೌನ್‌ನಲ್ಲಿ ಕುಡಿಯಲಿಕ್ಕೆ ನೀರು ಇಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಆ ಫೈಲ್ ಮಾನ್ಯ ಶಿವಣ್ಣನವರ ಹತ್ತಿರ ಹೋಗಿದೆ, ನನ್ನ ಹತ್ತಿರ ಇಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಫೈಲ್ ಯಾರ ಹತ್ತಿರ ಹೋಗಿದೆಯೋ ಅದು ಬೇರೆ ವಿಷಯ. ಅಲ್ಲಿ ಕುಡಿಯಲಿಕ್ಕೆ ನೀರಿಲ್ಲ ಮಾನ್ಯ ಶಿವಣ್ಣನವರೇ ಹೇಳಲಿ,

ಅಧ್ಯಕ್ಷರು.—ಆ ಕ್ವೆಶ್ಚನ್ ಹೆಲ್ಡ್ ಓವರ್ ಮಾಡಿದ್ದೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಲ್ಯಾಪ್ಸ್ ಆಗಬಾರದು.

ಅಧ್ಯಕ್ಷರು.—ಲ್ಯಾಪ್ಸ್ ಆಗುವುದಿಲ್ಲ. ಮುಂದಿನವಾರ ಬರುತ್ತದೆ. ತಾವು ಫೈಲ್ ಅವರ ಹತ್ತಿರ ಕಳುಹಿಸಿಕೊಡಿ.

ದಕ್ಷಿಣ ಕನ್ನಡದ ನಂದಿಕೂರು ಉಷ್ಣ ಸ್ಥಾವರದ ವಿವರ.

೩೮೪ ಶ್ರೀ ಬಿ. ಎಂ, ಇದಿನಬ್ಬ (ಉಳ್ಳಾಲ).—ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡದ ನಂದಿಕೂರು ಉಷ್ಣ ಸ್ಥಾವರದ ಕಾರ್ಯ ಪ್ರಾರಂಭವಾಗಿದೆಯೇ ;

ಆ) ಅದಕ್ಕಾಗಿ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣ ಎಷ್ಟು? ಇನ್ನು ಎಷ್ಟು ಜಮೀನನ್ನು ವಶಪಡಿಸಿಕೊಳ್ಳುವುದು ಬಾಕಿ ಇದೆ;